# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಗದಗ

ಎಸ್‌ಸಿ ನಂ. 56/2022

ಸಿಡಬ್ಲು: 17 / ಪಿಡಬ್ಲು: 7

ದಿನಾಂಕ: 27.11.2024

**ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

| | | |
|---|---|---|
| ಸಾಕ್ಷಿದಾರರ ಹೆಸರು | : | ಸುರೇಶ ನಾಯಕ |
| ತಂದೆಯ ಹೆಸರು | : | ಶೇಲಪ್ಪ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಪಿಡಿಓ, ಹಾತಲಗೇರಿ ಗ್ರಾಮ ಪಂಚಾಯತಿ |
| ವಾಸ ಸ್ಥಳ | : | ಗದಗ |

## ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರವರಿಂದ:

1. ಪ್ರಾಸಾ-1 ರವರು ನನ್ನ ಅತ್ತಿಗೆ ಇರುತ್ತಾರೆ. ಮೃತ ಸೋಮಲೆಪ್ಪ ನಾಯಕ ನನ್ನ ಅಣ್ಣನಿದ್ದನು. ಪ್ರಾಸಾ-1 ರವರು ಮೃತ ಸೋಮಲೆಪ್ಪ ರವರ ಹೆಂಡತಿ ಇರುತ್ತಾರೆ. ಪ್ರಾಸಾ-5, ಚಾಸಾ-10 ರಿಂದ 13 ರವರು ನನಗೆ ಪರಿಚಯ ಇರುತ್ತಾರೆ. ಪ್ರಾಸಾ-6 ನನ್ನ ಅಕ್ಕನ ಮಗ ಇರುತ್ತಾನೆ. ಚಾಸಾ-16 ನನ್ನ ಅಣ್ಣನಿರುತ್ತಾನೆ.

2. ಮೃತ ಸೋಮಲೆಪ್ಪ ನಾಯಕ ರವರು ಹತ್ತಿಕಟ್ಟಿ ಗ್ರಾಮದ ನಾಯಕರಾಗಿದ್ದು ಅವರು ಕುಟುಂಬ ಸಮೇತ ಅಲ್ಲಿ ವಾಸವಾಗಿದ್ದರು.

3. ನ್ಯಾಯಾಲಯದ ವಿ.ಸಿ.ಯಲ್ಲಿ ಕಾಣಿಸುವ ಆರೋಪಿ ನನಗೆ ಗೊತ್ತು. ಆರೋಪಿ ಕೂಡಾ ಹತ್ತಿಕಟ್ಟಿ ಗ್ರಾಮದವರಾಗಿರುತ್ತಾರೆ. ಆರೋಪಿಗೆ 18 -19 ವರ್ಷಗಳ ಹಿಂದೆ ಮದುವೆಯಾಗಿರುತ್ತದೆ. ಆರೋಪಿಗೆ 5 ಜನ ಮಕ್ಕಳು ಇರುತ್ತಾರೆ. ಆರೋಪಿ ಮತ್ತು ಆತನ ಹೆಂಡತಿಯ ಸಂಸಾರ ಚೆನ್ನಾಗಿರಲಿಲ್ಲ. ಆತನ ಹೆಂಡತಿಯು ಆರೋಪಿಯೊಂದಿಗೆ ವೈಮನಸ್ಸು ಮಾಡಿಕೊಂಡು ತನ್ನ ತವರು ಮನೆಯಾದ ಚಂದಾಪುರ ಗ್ರಾಮಕ್ಕೆ ಹೋಗಿ ವಾಸ ಮಾಡಿಕೊಂಡಿದ್ದಳು.

4. ಆರೋಪಿಯು ಮೃತ ಸೋಮಲೆಪ್ಪ ನಾಯಕ ಹಾಗೂ ಚಾಸಾ-10 ರಿಂದ 13 ರವರಿಗೆ ತನ್ನ ಸಂಸಾರವನ್ನು ಸರಿಪಡಿಸಬೇಕೆಂದು ಕೇಳುತ್ತಿದ್ದರು. ಈ ಬಗ್ಗೆ ಮೃತ ಸೋಮಲೆಪ್ಪ ನಾಯಕ ಹಾಗೂ

ಚಾಸಾ-10 ರಿಂದ 13 ರವರು ಆರೋಪಿಗೆ ಮತ್ತು ಆರೋಪಿಯ ಹೆಂಡತಿಗೆ ಬುದ್ದಿ ಹೇಳಿದ್ದರು. ಆದರೂ ಕೂಡಾ ಆತನ ಸಂಸಾರ ಸರಿ ಹೋಗಿರಲಿಲ್ಲ. ತನ್ನ ಸಂಸಾರವನ್ನು ಸರಿ ಮಾಡಿರುವುದಿಲ್ಲ ಎಂದು ಆರೋಪಿಯು ಮೃತ ಸೋಮಲೆಪ್ಪ ನಾಯಕ ಇವರ ವಿರುದ್ಧ ದ್ವೇಷವನ್ನು ಸಾಧಿಸುತ್ತಿದ್ದನು.

5. ದಿಃ 04.03.2022 ರಂದು, ರಾತ್ರಿ 08.30 ಗಂಟೆಗೆ ಮೃತ ಸೋಮಲೆಪ್ಪ ನಾಯಕ, ಚಾಸಾ-11, 12, 13 ಹಾಗೂ ಚಾಸಾ-10 ರವರು ದೇವಸ್ಥಾನದ ಉದ್ಘಾಟನೆ ಮಾಡುವ ಬಗ್ಗೆ ಮಾತನಾಡಲು ಸೇರಿದ್ದರು. ಆ ಸಮಯದಲ್ಲಿ ಆರೋಪಿಯು ಅಲ್ಲಿಗೆ ಬಂದು ಮೃತ ಸೋಮಲೆಪ್ಪ ಇವರಿಗೆ ಚಪ್ಪಲಿಯನ್ನು ತೋರಿಸಿ, ನನ್ನ ಸಂಸಾರವನ್ನು ಸರಿ ಮಾಡು ಎಂದು ಹೇಳಿದರೆ, ನೀನು ಇಲ್ಲಿ ಬಂದು ಕುಳಿತಿದ್ದೀಯಾ ಎಂದು, ಕಾಲಿನಿಂದ ಒದ್ದು, ಚಾಕುವಿನಿಂದ ಅವರ ಕುತ್ತಿಗೆಗೆ, ಗದ್ದಕ್ಕೆ, ಹೊಕ್ಕಳಕ್ಕೆ, ಕೈಗೆ ಚುಚ್ಚಿ ಗಾಯಪಡಿಸಿರುತ್ತಾನೆ. ಈ ಬಗ್ಗೆ ರಾತ್ರಿ 09.30 ಗಂಟೆ ಸುಮಾರಿಗೆ ನಮ್ಮ ಮನೆಯಿಂದ ನನಗೆ ಫೋನ ಮಾಡಿ ಆರೋಪಿ ಚಾಕು ಚುಚ್ಚಿದ ಬಗ್ಗೆ ತಿಳಿಸಿ, ಮೃತ ಸೋಮಲೆಪ್ಪ ಇವರನ್ನು ಗದಗ ಜಿಲ್ಲಾ ಆಸ್ಪತ್ರೆಗೆ ಕರೆದುಕೊಂಡು ಬರುತ್ತಿರುವುದಾಗಿ ತಿಳಿಸಿರುತ್ತಾರೆ.

6. ಆಗ ನಾನು ನೇರವಾಗಿ ಗದಗ ಜಿಲ್ಲಾ ಆಸ್ಪತ್ರೆಗೆ ಬಂದಿರುತ್ತೇನೆ. ಮೃತ ಸೋಮಲೆಪ್ಪ ಇವರನ್ನು ಪ್ರಾಸಾ-5 ರವರ ಬೋಲೇರೋ ವಾಹನದಲ್ಲಿ ಪ್ರಾಸಾ-1 ಮತ್ತು 6 ರವರು ಕರೆದುಕೊಂಡು ಬಂದಿದ್ದರು. ನಾನು ನನ್ನ ಅಣ್ಣನನ್ನು ನೋಡಿದಾಗ, ಆತನು ಮೃತಪಟ್ಟಿದ್ದನು, ಆತನಿಗೆ ಕುತ್ತಿಗೆಗೆ, ಗದ್ದಕ್ಕೆ, ಹೊಕ್ಕಳಕ್ಕೆ ಮತ್ತು ಕೈಗೆ ರಕ್ತ ಗಾಯಗಳಾಗಿದ್ದವು ಮತ್ತು ಆತನ ಬಟ್ಟೆಗೆಲ್ಲಾ ರಕ್ತವಾಗಿತ್ತು. ವೈದ್ಯರು ರಾತ್ರಿ 09.45 ಗಂಟೆಗೆ ಮೃತ ಸೋಮಲೆಪ್ಪನನ್ನು ಪರೀಕ್ಷೆ ಮಾಡಿ, ಆತನು ಮೃತಪಟ್ಟಿರುವುದಾಗಿ ಹೇಳಿರುತ್ತಾರೆ. ಈ ವಿಷಯದ ಬಗ್ಗೆ ನಾನು ಪ್ರಾಸಾ-1 ಮತ್ತು 6 ರವರನ್ನು ಕೇಳಿರುತ್ತೇನೆ.

7. ದಿನಾಂಕಃ 05.03.2022 ರಂದು, ಮದ್ಯಾಹ್ನ 01.00 ರಿಂದ 02.00 ರ ಸಮಯದಲ್ಲಿ ನನ್ನ, ಚಾಸಾ-4 ಮತ್ತು ಪ್ರಾಸಾ-3 ರವರ ಸಮಕ್ಷಮ ಮೃತ ಸೋಮಲೆಪ್ಪನ ಶವದ ಪಂಚನಾಮೆಯನ್ನು ಗದಗ ಜಿಲ್ಲಾ ಆಸ್ಪತ್ರೆಯ ಶವಾಗಾರದಲ್ಲಿ ಮಾಡಲಾಗಿರುತ್ತದೆ. ಮೃತ ಸೋಮಲೆಪ್ಪನ ಶವವನ್ನು ನಾನು ಗುರುತಿಸಿರುತ್ತೇನೆ. ಆ ಸಮಯದಲ್ಲಿ ನಿಪಿ-8 ರಂತೆ ಫೋಟೋವನ್ನು ತೆಗೆಯಲಾಗಿರುತ್ತದೆ. ನಿಪಿ-8 ರ ಕ್ರಮ ಸಂಖ್ಯೆಃ 4 ರಲ್ಲಿ ನನ್ನ ಭಾವಚಿತ್ರ ಇರುತ್ತದೆ.

8. ನಂತರ ಮೃತ ಸೋಮಲೆಪ್ಪನ ಶವದ ಮರಣೋತ್ತರ ಪರೀಕ್ಷೆಯನ್ನು ಮಾಡಲಾಗಿರುತ್ತದೆ. ಪರೀಕ್ಷೆಯ ನಂತರ ಶವವನ್ನು ನನ್ನ ತಾಬಾಕ್ಕೆ ಕೊಡಲಾಗಿರುತ್ತದೆ. ಶವವನ್ನು ತೆಗೆದುಕೊಂಡ ಬಗ್ಗೆ ನಾನು ಪಾವತಿ ಬೇಸ್ಕಿಯನ್ನು ಬರೆದುಕೊಟ್ಟಿರುತ್ತೇನೆ. **ಈಗ ಸದರಿ ಪಾವತಿ ಬೇಸ್ಕಿಯನ್ನು**

**ನೋಡುತ್ತಿದ್ದು, ಅದನ್ನು ನಿಪಿ-18 ಎಂದು, ಸಾಕ್ಷಿಯ ಸಹಿಯನ್ನು ನಿಪಿ-18(ಎ) ಎಂದು ಗುರುತಿಸಲಾಯಿತು.** ಈ ಬಗ್ಗೆ ಪ್ರಾಸಾ-1 ರವರು ಪೋಲೀಸರಿಗೆ ದೂರನ್ನು ಕೊಟ್ಟಿರುತ್ತಾರೆ.

9. ಮೃತ ಸೋಮಲೆಪ್ಪನ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಅವುಗಳನ್ನು ನೋಡುತ್ತಿದ್ದು, ಅವುಗಳನ್ನು ಈಗಾಗಲೇ 2 ರಿಂದ 4 ಎಂದು ಗುರುತಿಸಲಾಗಿರುತ್ತದೆ. ಈ ಬಗ್ಗೆ ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟಿ ಸವಾಲುಃ ಶ್ರೀ ಎಂ.ಕೆ. ಚವಡಿ ವಕೀಲರಿಂದ, ಶ್ರೀ ಸಿ. ಎಸ್. ಸಂಕನಗೌಡರ, ಆರೋಪಿ ಪರ ವಕೀಲರ ಪರವಾಗಿಃ**

**(ಶ್ರೀ ಎಂ.ಕೆ. ಚವಡಿ ವಕೀಲರು ಪಾಟಿ ಸವಾಲಿಗೆ ಸಮಯ ಕೋರಿದ್ದರಿಂದ, ರೂ.200/- ಗಳ ಖರ್ಚಿನ ಮೇರೆಗೆ ಪಾಟಿ ಸವಾಲನ್ನು ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ, ನನ್ನ ಉಕ್ತ ಲೇಖನದಂತೆ, ಸಾಕ್ಷಿಯ ಸಾಕ್ಷವನ್ನು ಬೆರಳಚ್ಚು ಮಾಡಿಸಲಾಯಿತು.)**

**ಓ ಹೇ ಕೇ ಸರಿ ಅದೆ.**

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**
**ಗದಗ**